

ನವನವೀನವಾಗಿತ್ತು. ನಾವು ಬಡಾವಣೆಯ ಸಮಸ್ತರು ಕಲೆತು ಹಾದಿಬದಿಯುದ್ದಕ್ಕೂ ಗಿಡ ನೆಟ್ಟು, ತಂತಿಜಾಲರಿಯಿದ್ದ ಟೀಗಾರ್ಡುಗಳನ್ನು ಅಳವಡಿಸಿ ವನಮಹೋತ್ಸವ ಆಗಷ್ಟೆ ಆಚರಿಸಿದ್ದೆವು. ದಿನಗಳೆದಂತೆ ಒಂದೊಂದೇ ಗಾರ್ಡು ಕಣ್ಮರೆಯಾಗತೊಡಗಿದವು. ಉಳಿದಿದ್ದು ನಮ್ಮ ಮನೆ ಮುಂದಿನದೊಂದೇ. ನಾನೂ ತಮ್ಮನೂ ಕಳ್ಳನ ಹಿಡಿಯಲು ನಿರ್ಧರಿಸಿದೆವು. ನಡುರಾತ್ರಿ ಆಗಿದ್ದೀತು. ಗಾಢಾಂಧಕಾರ. ಟ್ರೀಗಾರ್ಡು ಅಲ್ಲಾಡತೊಡಗಿತು. ಗಿಡ ಸರಸರಗೈದಿತು. ಬ್ಯಾಟರಿ ಹಾಕಿದೆ. ಕಳ್ಳ ಓಡಿಹೋಗಲಾಗದಷ್ಟು ನಶೆಯಲ್ಲಿದ್ದನಾಗಿ ಸುಲಭವಾಗಿ ಸೆರೆಸಿಕ್ಕ. ಸೌದೆ ಕೊಳ್ಳುವ ಕಾಸಿನಲ್ಲಿ ಎಣ್ಣೆಹಾಕಿ, ಟ್ರೀಗಾರ್ಡಿನ ಗೂಟಗಳನ್ನು ಆತ ಮನೆಗೊಯ್ಯುತ್ತಿದ್ದನು. ಅವನನ್ನು ಒಯ್ದು ಅವನ ಹೆಂಡತಿ ಮುಂದೆ ನಿಲ್ಲಿಸಿದೆವು. ಆಕೆ, 'ಅಣ್ಣಾ, ಮನ್ಯಾಗಿದ್ದ ಹಾರೆ ಪಿಕಾಸಿ ಮಚ್ಚು ಎಲ್ಲ ಗುಜರಿಗೆ ಹಾಕಿದಾನೆ. ನಾನು ಕೂಲಿ ಮಾಡಿ ಕಟ್ಟಿದ್ದ ಗಂಟನ್ನು ಎತ್ತಿದಾನೆ' ಎಂದು ಭೋರಾಡಿದಳು. ಪಾಪ ಅನಿಸಿತು. ಸಂತೈಸಿದೆ. ಆಕೆ ಉತ್ತೇಜಿತಳಾಗಿ ಪತಿದೇವರು ಕಿತ್ತುತರುವ ಬೇಲಿಗೂಟಗಳನ್ನು ಸೀಳಲು ಒಂದು ಕೊಡಲಿ ಕೊಡಿಸಬೇಕೆಂದು ಬೇಡಿಕೆಯಿಟ್ಟಳು. ನಮಾಜು ಮಾಡಲು ಹೋದರೆ ಮಸೀದಿ ಮೈಮೇಲೆ ಬಿದ್ದಿತು.

ಪಾನಲೋಕದ ರಂಪಗಳು ಶ್ರೀಸಾಮಾನ್ಯರಲ್ಲಿ ಮಾತ್ರವಲ್ಲ, ಗಣ್ಯರ ಬದುಕಲ್ಲೂ ಇವೆ. ತಮ್ಮ ಸಾರ್ವಜನಿಕ ಇಮೇಜಿನ ಬಗ್ಗೆ ಅತಿಯಾದ ನಂಬಿಕೆಯಿರುವ ಕೆಲವರು, ಕಾರ್ಯಕ್ರಮ ಒಪ್ಪುವಾಗ ತಕ್ಕಪಾರ್ಟಿ ಕೊಡಬೇಕೆಂಬ ಶರತ್ತು ವಿಧಿಸುವುದುಂಟು. ಒಬ್ಬ ಖ್ಯಾತ ವಾಗ್ಮಿಯೊಬ್ಬರು ಹೀಗೆ ಶರತ್ಪೂರ್ವಕ ಕಾರ್ಯಕ್ರಮಕ್ಕೆ ಹೋಗಿದ್ದರು. ಆತಿಥೇಯರು ಏರ್ಪಡಿಸಿದ ಪಾರ್ಟಿ ವಾಗ್ಮಿಗಳ ಒಡ್ಡೋಲಗದಿಂದ ರಂಗೇರಿ ನಡುರಾತ್ರಿಗೆ ಎಳೆಯಿತು. ನಗರದ ನಿಯಮದ ಪ್ರಕಾರ ರಾತ್ರಿ ಹನ್ನೆರಡಕ್ಕೆ ಪಾನಶಾಲೆ ಮುಚ್ಚಬೇಕು. ವೈಟರುಗಳು ಗೋಷ್ಠಿಯನ್ನು ಮುಕ್ತಾಯಗೊಳಿಸಬೇಕೆಂದು ವಿನಂತಿಸಿದರು. ವಾಗ್ಮಿಯವರು ಕೆರಳಿ, 'ಎಲೇ, ಕರೀ ನಿಮ್ಮ